ಅಮ್ಮ ಮನೇಲಿಲ್ಲದೇ ಒಬ್ಬನೇ ಇದ್ದ ಈ ರೀತಿ ಅತ್ತೆನಲ್ಲ!' ಅಂತ ಸಮಾಧಾನಪಡಿಸಿಕೊಂಡ. ಈ ಸಂಜೆ ವೀಣಾಳನ್ನ ಕಾಣಲು ಹೋಗುವುದಿಲ್ಲ ಎಂದು ನಿರ್ಧರಿಸಿ ವಿಷಾದದಲ್ಲಿ ಅದ್ದಿದಂತೆ ಮುದುಡಿಕೊಂಡ ಗರುಡನಿಗೆ ಕನಿಷ್ಠ ಈ ದಿನ ಹುಟ್ಟುತ್ತಿರೋ ಈ ಮನಸ್ಸಿನ ಮಾತೆಲ್ಲವನ್ನ ದಾಖಲಿಸಬೇಕೆನ್ನಿಸಿ ಬರೆಯಲು ಕೂತ.

ಗರುಡ ಬರೆಯುತ್ತಲೇ ಇದ್ದ! ಹುಟ್ಟುತ್ತಿದ್ದ ಎಲ್ಲ ಮಾತು, ಅನ್ನಿಸಿಕೆ, ಹಳಹಳಿಕೆ ಎಲ್ಲವನ್ನೂ ಅಕ್ಷರದಲ್ಲಿ ಮೂಡಿಸುತ್ತಾ, 'ಇದು ಕೊನೆಗೆ ಕತೆ ಆದೀತೆ? ಎಂದು ನಡು ನಡುವೆ ಯೋಚಿಸುತ್ತಾ ಬರೆಯುತ್ತಲೆ ಇದ್ದ. ಒಂದಷ್ಟು ಕೂಗುಗಳಿಗೆ ಎಚ್ಚರವಾದಂತೆ ಎದ್ದು ಬಾಗಿಲನ್ನು ತೆರೆದಾಗ ಗರುಡನಿಗೆ ಎದುರಲ್ಲಿ ರಫಿ, ನಾಣಿ, ಐತಾಳ, ಜಾಗೀರ್ದಾರ ಎಲ್ಲರನ್ನ ಒಟ್ಟಿಗೇ ಕಂಡು ಆಶ್ಚರ್ಯವಾಯಿತು. ಎಲ್ಲರೂ ಬಹಳ ಹೊತ್ತು ಕೂಗಿದರೂ ಬಾಗಿಲು ತೆಗೆಯದೇ ಸತ್ತಂತಿದ್ದ ಗರುಡನಿಗೆ ಬೈದು ಅವನನ್ನು ಕರೆದುಕೊಂಡು ಹೊರಬಿದ್ದರು.

ಮತ್ತದೇ ಬಾರ್ ಅಂಡ್ ರೆಸ್ಟುರೆಂಟ್! ಈವರೆಗೆ ಮನಸ್ಸಿನ ಮಾತು, ಬರವಣಿಗೆ, ಕತೆಯೊಂದರಲ್ಲಿ ಪಾತ್ರದಂತೆ ಮುಳುಗಿದ್ದ ಗರುಡ ತಟ್ಟನೇ ಎಚ್ಚರವಾದಾಗಿನ ಗಲಿಬಿಲಿಯಲ್ಲಿದ್ದಂತೆ ಶಂಭುನಾಯ್ಕನನ್ನ ಹುಡುಕಿದ. ಆ ಜಾಗದಲ್ಲಿ ಕೂತ ಹೊಸ ಹುಡುಗ ಶಂಭುನಾಯ್ಕ ಸತ್ತುಹೋದುದಾಗಿ ಹೇಳಿದಾಗ ಗರುಡನಿಗೆ ಬಿಕ್ಕಿಬಿಕ್ಕಿ ಅಳಬೇಕು ಅಂತ ತೀವ್ರವಾಗಿ ದುಃಖವಾಯ್ತು.

ತನ್ನ ಅರಿವನ್ನೂ ಮೀರಿ ಅಳುತ್ತಿದ್ದ ಗರುಡನಿಗೆ ರಫಿ ಹೇಳತೊಡಗಿದ... 'ಹೌದೋ ಗರುಡ. ಅವ ಶಂಭುನಾಯ್ಕ ಸತ್ತು ಹೋದ. ಆದರೆ ಬದುಕಿದಷ್ಟು ಹೊತ್ತು ಬದುಕೇ ಇದ್ದ. ಅವನೊಂದು ಅಸ್ತಂಗತ ಸೂರ್ಯ. ನಾಳೆ ಮತ್ತೆ ಅವ ಹುಟ್ಟೇ ಹುಟ್ಟುತ್ತಾನೆ. ಆದರೆ ನಾವು ಇದ್ದೀವಲ್ಲ ಬೇವರ್ಸಿಗಳು... ಎಲ್ಲಿ ನಿನ್ನೆಗಳ ಗತದಿನಗಳಲ್ಲಿ ಸತ್ತೇಹೋಗಿ ಈಗ ವರ್ತಮಾನದಲ್ಲಿ ಬದುಕೇ ಇಲ್ಲ ಅಂತ ಅಳ್ತಿದ್ದೇವೆ. ಇದಕ್ಕೆ ಏನು ಇಲಾಜು ಇದೆಯೋ ಆ ಅಲ್ಲಾಗೇ ಗೊತ್ತು. ನಂಗೆ ಅನಿಸ್ತದೆ, ನಿನ್ನೆಯವರು ಅವರವರ ಅಂದಿನ ವರ್ತಮಾನವನ್ನ ಸಮರ್ಥವಾಗಿ ಬಳಸಿ ಅರ್ಥಪೂರ್ಣವಾಗಿ ಬದುಕಿ ಹೋದರು. ಈಗಿನ ಹುಡುಗರು ನಾಳೆಯ ಕ್ಷಣಗಳಲ್ಲಿ ಈಗಲೇ ಕಳೆದು ಹೋಗಿದ್ದರೆ ನಾವು... ಈ ನಮ್ಮ ಒಂದು ಸಮುದಾಯವೇ ನಿನ್ನೆ ಮತ್ತು ನಾಳೆಗಳ ಮಧ್ಯ, ಇಂದು ಮತ್ತು ಈ ಕ್ಷಣದ ನಡುವೆ ಒಂದು ಅಗೋಚರ ಕ್ಷಣದಲ್ಲಿ ಅಸ್ತಂಗತರಾಗಿದ್ದೇವೆ. ನಾವು ಮತ್ತೆ ಮೂಡುವಂತೆ ಇಲ್ಲ!' ಗರುಡನಿಗೆ ಹೇಳುತ್ತಾ ರಫಿ ಅಳತೊಡಗಿದ. ಶಂಭುನಾಯ್ಕ ಸತ್ತುದಕ್ಕೆ ಕೊಂಚ ಹೆಚ್ಚೇ ಕುಡಿದ. ಉಳಿದ ಮೂವರೂ ಕಣ್ತುಂಬಿಕೊಂಡರು! ಗರುಡನಿಗೆ ತನ್ನ ಬರಹದ ಕೊನೇ ಸಾಲುಗಳು ಹೊಳೆದವು!!

## ಸ್ಪಷ್ಟೀಕರಣ:

ಇದು ಕತೆಯಲ್ಲ. ಆತ್ಮವೇ ಇಲ್ಲದ ಒಂದು ಅಬ್ಬೇಪಾರಿ ಸಮುದಾಯದ ಆತ್ಮಕತೆ ಇದು. ನಿಜ ಹೇಳಬೇಕೆಂದರೆ ಇಲ್ಲಿ ನಾವೆಲ್ಲ ನಿಜ! ಒಂದು ಸುಸಂಗತ ಕತೆಯ ಅಸಂಗತ ಪಾತ್ರಗಳಂತೆ ನಾವೆಲ್ಲ ನಿಮ್ಮ ನಡುವೆ ಬದುಕೇ ಇದ್ದೇವೆ. ಆದರೆ ಈ ಹೆಸರುಗಳಲ್ಲ. ಬೇರೆ ಹೆಸರುಗಳೊಂದಿಗೆ.

## ವಿಶೇಷ ಸೂಚನೆ:

ಈ ಬರಹದ ಎಲ್ಲ ಮಾತನ್ನು ಗೊಂದಲ ತುಂಬಿಕೊಂಡ ಸಮುದಾಯದ, ನಿಶ್ಶಕ್ತ ಯುವಕರ ಕನಸುಗಳೇ ಇಲ್ಲದ ಮುದಿ ಮನಸ್ಸುಗಳಿಗೆ, ಅರ್ಪಣೆ ಮಾಡಿರುವುದರಿಂದ ಓದಿದ ಯಾರಿಗೇ – 'ಇದು ನನ್ನದೂ ಸ್ಥಿತಿ' ಅನ್ನಿಸಿದರೆ ಅವರೂ ಹೊಸತೊಂದು ಹೆಸರು ಧರಿಸಿ ಕತೆಯೊಳಗೆ ಪ್ರವೇಶಿಸಬಹುದು.